> ಹಲವು ಅಪಾಯಗಳನ್ನು ಎದುರಿಸಿ ಹ್ಯಾನಿ ಅಬುಅಸಾದ್ ನಿರ್ದೇಶಿಸಿರುವ 'ಪ್ಯಾರಡೈಸ್ ನೌ' ಚಿತ್ರವು ಭಯೋತ್ಪಾದನೆಯನ್ನು ನಾವು ನೋಡುವ ಕ್ರಮವನ್ನೇ ಕೆಣಕುವ ಉಮೇದನ್ನು ಪ್ರಕಟಿಸುತ್ತದೆ

ಸಮಾಜೋ ರಾಜಕೀಯ ವಸ್ತುಗಳನ್ನು ಸಿನಿಮಾ ಮಾಡುವಾಗ ಕಾಣುವ ಭಾರತೀಯ ಮಾದರಿಗಳು ಅತಿ ತೆಳುವಾದವು. ಬಾಂಬ್ ಸ್ಫೋಟಿಸುವವನನ್ನೋ ಭಯೋತ್ಪಾದಕನನ್ನೋ ನಮ್ಮ ಭಾರತೀಯ ಚಿತ್ರಗಳು ಬಿಂಬಿಸುವ ಬಗೆ ವಾಸ್ತವವನ್ನು ಮೀರಿದ್ದಾಗಿರುವುದೇ ಹೆಚ್ಚು. ಅದೂ ಅಲ್ಲದೆ ಹೋದರೆ, ಉತ್ಪ್ರೇಕ್ಷಿತ ನೆಲೆಯಲ್ಲಿ ಮನರಂಜನೆಯನ್ನಾಗಿ ಉಗ್ರರ ಕಥಾನಕಗಳನ್ನೂ ತೋರಿಸಿಬಿಡುವ ಅಪಾಯವಿದೆ. ಹತಾಶ ವೃದ್ಧನ ಕಡುಗೋಪದ ಕಥನ ತೋರಿದ 'ಎ ವೆಡ್‌ನೆಸ್ ಡೇ' ಹಿಂದಿ ಚಿತ್ರವನ್ನು ಇದಕ್ಕೆ ಉದಾಹರಣೆಯನ್ನಾಗಿ ನೋಡಬಹುದು.

ಇಂಥ ಯಾವುದೇ ಸೂತ್ರಬದ್ಧ ಕಟ್ಟುವಿಕೆಯ ಹಂಗಿಗೆ ಒಳಪಡದೇ ಇರುವ ಚಿತ್ರವಾಗಿ 'ಪ್ಯಾರಡೈಸ್ ನೌ' ಗಮನ ಸೆಳೆಯುತ್ತದೆ. ಭಯೋತ್ಪಾದನೆಯ ಮನುಷ್ಯ ಮುಖಗಳನ್ನು ಒಳಗೊಳ್ಳುವ ಈ ಸಿನಿಮಾದ ನಿರೂಪಣೆಯ ಸಂಕೀರ್ಣ ತರ್ಕ ಕೂಡ ಚರ್ಚಾರ್ಹ.

